ಕರ್ನಾಟಕ ಸರ್ಕಾರ
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಡಿಕೇರಿ, ಕೊಡಗು ಜಿಲ್ಲೆ, ಕರ್ನಾಟಕ

Phone: 08272 298220 Fax: 08272 298260 Website: www.kimskodagu.kar.nic.in E-mail:directormckodagu@gmail.cor

# ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಡಿಕೇರಿ ಇಲ್ಲಿ ಖಾಲಿ ಇರುವ ಶುಶ್ರೂಷಕ ಹುದ್ದೆಗಳಿಗೆ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಮಾಡುವ ಬಗ್ಗೆ

## -:ಅಧಿಸೂಚನೆ:-

ಸಂಖ್ಯೆ: ಕೊ.ವೈ.ವಿ.ಸಂ.ಮ/ಇಎಸ್‌ಟಿ(1)/52/2022-23 ದಿನಾಂಕ:21/06/2022

| | |
|---|---|
| ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ 21/06/2022 |
| ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 02/07/2022 ಕಛೇರಿ ಸಮಯ 5 :00 ಗಂಟೆ |

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಡಿಕೇರಿ ಇಲ್ಲಿನ ಬೋಧಕ ಆಸ್ಪತ್ರೆಯಲ್ಲಿ ಖಾಲಿ ಇರುವ ಅಗತ್ಯವಿರುವ ಈ ಕೆಳಕಂಡ 35 ಶುಶ್ರೂಷಕ ಹುದ್ದೆಗಳಿಗೆ ಕರ್ತವ್ಯ ನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಮೇಲ್ಕಾಣಿಸಿದ ಹುದ್ದೆಗಳನ್ನು 11 ತಿಂಗಳ ಅವಧಿಗೆ ಅಥವಾ ಖಾಯಂ ಶುಶ್ರೂಷಕರ ನೇಮಕಾತಿ ಆಗುವವರೆಗೆ ಅಥವಾ ಮುಂದಿನ ಸರ್ಕಾರಿ ಆದೇಶದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.

| ಕ್ರ ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ವೇತನ ಶ್ರೇಣಿ |
|---|---|---|---|---|
| 1 | ಶುಶ್ರೂಷಕಾಧಿಕಾರಿಗಳು | 35 | Should posses Diploma in Nursing With Midwifery training OR B.Sc Nursing, Should have registered in Karnataka State Nursing Council. | ಸರ್ಕಾರಿ ಆದೇಶ ಸಂಖ್ಯೆ ಆಕುಕ 224 ಎಂ ಎಂ ಇ 2018 ಬೆಂಗಳ ದಿನಾಂಕ 26-02-2019 ರಂತೆ ವೇತನ ಪಾವತಿಸಲಾಗುವುದು |

### ಹುದ್ದೆಗಳ ಮೀಸಲಾತಿ ವರ್ಗೀಕರಣ

| S No | Designation | Posts | Roster NON HK | HK |
|---|---|---|---|---|
| 1. | Nursing Officer | 35 | IIA(M)-1; IIB(M)-1; IIA(W)-2; SC(R)-2; GM(R)-3; IIIB(M)-1; GM(EX)-2; IIA(R)-2; SC(PH)-1; IIA(PH)-1; GM(R)-2, SC(W)-3; GM(KM)-1; IIAW-1; GM-(W)-3; ST(W)-1, SC(M)-1; GM(M)-1; IIIB(W)-1; GM(PH)-2 | IIA(M)-1<br>GM(PH)-1<br>SC(W)-1 |

ಕರ್ನಾಟಕ ಸರ್ಕಾರ
**ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,**
**ಮಡಿಕೇರಿ, ಕೊಡಗು ಜಿಲ್ಲೆ, ಕರ್ನಾಟಕ**

Phone: 08272 298220 Fax: 08272 298260 Website: www.kimskodagu.kar.nic.in E-mail:directormckodagu@gmail.cor

**ವಯೋಮಿತಿ:–** ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೇಯ ದಿನಾಂಕದಂದು ಅಭ್ಯರ್ಥಿಗಳು ಈ ಕೆಳಕಂಡ ವಯೋಮಿತಿಯನ್ನು ಹೊಂದಿರಬೇಕು

| ವರ್ಗ | ಕನಿಷ್ಠ | ಗರಿಷ್ಠ |
|---|---|---|
| ಸಾಮಾನ್ಯ ವರ್ಗ | 18 ವರ್ಷಗಳು | 35 ವರ್ಷಗಳು |
| 2ಎ, 2ಬಿ, 3ಎ, 3ಬಿ | 18 ವರ್ಷಗಳು | 38 ವರ್ಷಗಳು |
| ಪ.ಜಾ,ಪ.ಪಂ, ಪ್ರವರ್ಗ1 | 18 ವರ್ಷಗಳು | 40 ವರ್ಷಗಳು |

**ಸೂಚನೆ:–**

- ಅಧಿಸೂಚನೆಯಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹಯನ್ನು ಹೊರತುಪಡಿಸಿ ಇನ್ನಿತರೆ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.
- ಪ್ರಕಟಿಸಿರುವ ಖಾಲಿ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.
- ವೈದ್ಯಕೀಯ ಶಿಕ್ಷಣ ಇಲಾಖೆ ಅಥವಾ ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆಯಿಂದ ಖಾಯಂ ಶುಶ್ರೂಷಕಾಧಿಕಾರಿಗಳು ನೇಮಕಗೊಂಡಲ್ಲಿ, ಅಥವಾ ಈ ಸಂಸ್ಥೆಗೆ ವರ್ಗಾವಣೆ ಹೊಂದಿದಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕಾಧಿಕಾರಿಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು.
- ಓರ್ವ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
- ವರ್ಗೀಕರಣ ಪಟ್ಟಿಯಲ್ಲಿ ಹುದ್ದೆಗೆ ನಿಗಧಿಪಡಿಸಿರುವ ಅಂಗವಿಕಲತೆ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು, ನಿಗಧಿ ಪಡಿಸಿರುವ ಅಂಗವಿಕಲತೆ ಹೊರತುಪಡಿಸಿ ಇತರ ಅಂಗವಿಕಲ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ. ಮತ್ತು ಮೀಸಲಾತಿಗೆ ಅರ್ಹರಿರುವುದಿಲ್ಲ.
- ಮೆರಿಟ್ ಕಂ ರೋಸ್ಟರ್ ಮತ್ತು ಅನುಭವಗಳ ಮೇಲೆ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು.

**ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ನಿಗಧಿಪಡಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು.**

ಅ) ಅಭ್ಯರ್ಥಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡದೆ ಅರ್ಜಿ ಭರ್ತಿಮಾಡಲು ನೀಡಿರುವ ಸೂಚನೆಗಳನ್ವಯ ಭರ್ತಿಮಾಡತಕ್ಕದ್ದು.

ಆ) ತಪ್ಪು ಮಾಹಿತಿಯನ್ನು ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹವರ ವಿರುದ್ಧ ಇಲಾಖಾ ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಪ್ರಕಟಿಸಿರುವ ಹುದ್ದೆಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ ಮೀಸಲಾತಿ ಇತ್ಯಾದಿ ದಾಖಲೆಗಳನ್ನು, ಅರ್ಜಿಸಲ್ಲಿಸಲು ನಿಗಧಿಪಡಿಸಿರುವ ಕೊನೇಯ ದಿನಾಂಕ ದೊಳಗೆ ಸಂಭಂಧಪಟ್ಟ ಪ್ರಾಧಿಕಾರದಿಂದ ಪಡೆದಿಟ್ಟುಕೊಳ್ಳತಕ್ಕದ್ದು, ಮತ್ತು ದಾಖಲೆಗಳ ಪರಿಶೀಲನೆ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಕೊನೇಯ ದಿನಾಂಕದ ನಂತರ ಪಡೆದ ಮೀಸಲಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ಸರ್ಕಾರ
# ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಡಿಕೇರಿ, ಕೊಡಗು ಜಿಲ್ಲೆ, ಕರ್ನಾಟಕ

Phone: 08272 298220 Fax: 08272 298260 Website: www.kimskodagu.kar.nic.in E-mail:directormckodagu@gmail.com

ಅರ್ಜಿಯನ್ನು ಮೀಸಲಾತಿಗೆ ಸಂಭಂಧಿಸಿದ ಅಂಕಣದಲ್ಲಿ ಉಪಯೋಗಿಸದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳುವುದು.

| | | | |
|---|---|---|---|
| ಸಾ.ಅ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ | ಪರಿಶಿಷ್ಠ ಜಾತಿ | SC | Scheduled caste |
| ಪ ಪಂ | ಪರಿಶಿಷ್ಠ ಪಂಗಡ | ST | Scheduled Tribe |
| ಪ್ರ–1 | ಪ್ರವರ್ಗ–1 | C-I | Cat-I |
| 2ಎ | ಪ್ರವರ್ಗ–2ಎ | C-II A | Cat-II A |
| 2ಬಿ | ಪ್ರವರ್ಗ–2ಬಿ | C-II B | Cat-II B |
| 3ಎ | ಪ್ರವರ್ಗ–3ಎ | C-III A | Cat-III A |
| 3ಬಿ | ಪ್ರವರ್ಗ–3ಬಿ | C-III B | Cat-III B |
| ಮಾಸೈ | ಮಾಜಿ ಸೈನಿಕ | EX-MP | Ex Military Person |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | RURAL | Rural Reservation |
| ಕ.ಮಾ.ಅ | ಕನ್ನಡ ಮಾಧ್ಯಮ ಅಭ್ಯರ್ಥಿ | KMS | Kannada Medium |
| ಅಂ.ವಿ | ಅಂಗವಿಕಲ ಅಭ್ಯರ್ಥಿ | PH | Physically Handicapped |
| ಯೋ.ನಿ | ಯೋಜನಾ ನಿರಾಶ್ರಿತ | PDP | Project Displaced Person |

**ಅರ್ಜಿ ಶುಲ್ಕ:–**

| | |
|---|---|
| ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯಥಿಗಳಿಗೆ | 300/– |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಮತ್ತು ಅಂಗವಿಕಲ ಅಭ್ಯಥಿಗಳಿಗೆ | 100/– |

1) ಅರ್ಜಿ ಶುಲ್ಕವನ್ನು ನಿರ್ದೇಶಕರು ಹಾಗೂ ಡೀನ್ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಡಿಕೇರಿ ಇವರ ಹೆಸರಿನಲ್ಲಿ ನಿಗಧಿಪಡಿಸಿದ ಕೊನೇಯ ದಿನಾಂಕದ ಮೊದಲು ಡಿ.ಡಿಯನ್ನು ಪಡೆದು ಅರ್ಜಿಯೊಂದಿಗೆ ಕಛೇರಿಗೆ ಸಲ್ಲಿಸತಕ್ಕದ್ದು.
2) ಅರ್ಜಿಯೊಂದಿಗೆ ಡಿ.ಡಿಯನ್ನು ಸಲ್ಲಿಸದೆ ಇರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.
3) ಕಛೇರಿಯ ಸಮಯದಲ್ಲಿ ಕಛೇರಿಯ ದೂರವಾಣಿ ಸಂಖ್ಯೆ 08272–298220 ನ್ನು ಸಂಪರ್ಕಿಸಬಹುದು.
4) ನಿಗಧಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಅರ್ಹತಾ ಷರತ್ತುಗಳು:–**

1. ಭಾರತೀಯ ನಾಗರೀಕನಾಗರತಕ್ಕದ್ದು,
2. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚುಮಂದಿ ಪತ್ನಿಯರನ್ನು ಅಥವಾ ಒಬ್ಬ ಜೀವಂತ ಪತಿಗಿಂತ ಹೆಚ್ಚುಮಂದಿ ಪತಿಯರನ್ನು ಮದುವೆಯಾಗಿರುವ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ
3. ಯಾವುದೇ ಕ್ರಿಮಿನಲ್ ಮೊಕ್ಕದ್ದಮ್ಮೆಗೆ ಒಳಗಾಗಿರಬಾರದು
4. ಶುಶ್ರೂಷಕ ಹುದ್ದೆಯು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದು, ಮುಂದಿನ ದಿನಗಳಲ್ಲಿ ಖಾಯಂ ಗೊಳಿಸಲು ನಾನು ನ್ಯಾಯಾಲಯದ ಮೋರೆ ಹೊಗುವುದಿಲ್ಲವೆಂದು ಒಪ್ಪಿಕೊಂಡು ಅರ್ಜಿಯನ್ನು ಸಲ್ಲಿಸಬೇಕು.

ಕರ್ನಾಟಕ ಸರ್ಕಾರ
**ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,**
**ಮಡಿಕೇರಿ, ಕೊಡಗು ಜಿಲ್ಲೆ, ಕರ್ನಾಟಕ**

Phone: 08272 298220 Fax: 08272 298260 Website: www.kimskodagu.kar.nic.in E-mail:directormckodagu@gmail.cor

**<u>ಆಯ್ಕೆಯ ವಿಧಾನ:-</u>**

1. ಜಿ.ಎನ್.ಎಂ ನರ್ಸಿಂಗ್, ಅಥವಾ ಬಿ ಎಸ್ಸಿ ನರ್ಸಿಂಗ್,ನಲ್ಲಿ ಪಡೆದ ಒಟ್ಟು ಅಂಕಗಳಿಗೆ 20 ಅಂಕಗಳು
2. ಹೆಚ್ಚಿನ ಉನ್ನತ ವಿದ್ಯಾಭ್ಯಾಸಕ್ಕೆ 10 ಅಂಕಗಳು
3. 100 ಹಾಸಿಗೆಗಿಂತ ಹೆಚ್ಚಿನ ಹಾಸಿಗೆ ಇರುವ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿದ ಅನುಭವದ ಆಧಾರದ ಮೇಲೆ 1 ವರ್ಷಕ್ಕೆ 1 ಕೃಪಾಂಕದಂತೆ ಗರಿಷ್ಠ 10 ಅಂಕಗಳು
4. ಐ.ಸಿ.ಯು, ಐ.ಸಿ.ಸಿ.ಯು, ಒ.ಟಿ, ಕೋವಿಡ್-19 ಮೊದಲಾದ ವಿಶೇಷ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಿದ ಆಧಾರದ ಮೇಲೆ 10 ಕೃಪಾಂಕಗಳು
5. ಒಟ್ಟು 50 ಕೃಪಾಂಕಗಳಿಗೆ ರೋಸ್ಟರ್ ಪದ್ಧತಿಯ ಮೂಲಕ ಆಯ್ಕೆಮಾಡಲಾಗುವುದು.

**<u>ದುರ್ನಡತೆ:-</u>**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಾಸ್ತಾವೇಜು ಅಥವಾ ತಿದ್ದಲಾದ ದಾಸ್ತಾವೇಜನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಡಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗೆ ನಡೆಸಲಾಗುವ ವೈದ್ಯಕೀಯ ಪರೀಕ್ಷೆಯಲ್ಲಿ/ ಮೂಲ ದಾಖಲಾತಿ ಪರಿಶೀಲನೆ ಸಮಯದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವನೆಂದು ಅಥವಾ ಅವರ ನೇಮಕಾತಿಯ ಸಂಭಂಧದಲ್ಲಿ ಯವುದೇ ಇತರ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರವನೆಂದು, ಕಂಡುಬಂದಿಲ್ಲ ಅವನು/ ಅವಳು ಸ್ವಂತ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಲಾಗುವುದು.

**ನಿರ್ದೇಶಕರು ಹಾಗೂ ಡೀನ್**
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಡಿಕೇರಿ

ನಿರ್ದೇಶಕರು ಹಾಗೂ ಡೀನ್
ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಡಿಕೇರಿ